# ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯ

ಜ್ಞಾನ ಸಾಗರ ಆವರಣ, ವಿನಾಯಕ ನಗರ, ಕಂಟೋನ್ಮೆಂಟ್, ಬಳ್ಳಾರಿ – ೫೮೩೧೦೫

ಕುಲಸಚಿವರು (ಮೌಲ್ಯಮಾಪನ) ದೂರವಾಣಿ: ೦೮೩೯೨-೨೯೧೧೧೧

ಸಂಖ್ಯೆ: ವಿಶ್ರೀಕೃವಿಬ/ಪರೀಕ್ಷಾ/ಸ್ನಾತಕ/ಬೋ-ಪ/೨೦೧೯-೨೦/945 ದಿನಾಂಕ: 24/07/2019

**ಸುತ್ತೋಲೆ**

**ವಿಷಯ :** 2019-20ನೇ ಶೈಕ್ಷಣಿಕ ಸಾಲಿನಲ್ಲಿ ಜರುಗಲಿರುವ ಸ್ನಾತಕ ಪದವಿ ಪರೀಕ್ಷೆಗಳ ಪ್ರಯುಕ್ತ ತಮ್ಮ ಮಹಾವಿದ್ಯಾಲಯದಲ್ಲಿ ಕಾರ್ಯನಿರ್ವಹಿಸುತ್ತಿರುವ ಬೋಧಕರ ಪಟ್ಟಿಯನ್ನು ಕಳುಹಿಸಿ ಕೊಡುವ ಕುರಿತು.

*****

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ ಈ ಮೂಲಕ ವಿಶ್ವವಿದ್ಯಾಲಯದ ಅಡಿಯಲ್ಲಿ ಬರುವ ಬಳ್ಳಾರಿ ಮತ್ತು ಕೊಪ್ಪಳ ಜಿಲ್ಲೆಯ ಎಲ್ಲಾ ಸ್ನಾತಕ ಪದವಿ ಮಹಾವಿದ್ಯಾಲಯದ ಪ್ರಾಂಶುಪಾಲರುಗಳ ಗಮನಕ್ಕೆ ತರಬಯಸುವುದೇನೆಂದರೆ, ೨೦೧೯-೨೦ನೇ ಶೈಕ್ಷಣಿಕ ಸಾಲಿನಲ್ಲಿ ಜರುಗಲಿರುವ ಸ್ನಾತಕ ಪದವಿ ಪರೀಕ್ಷೆಗಳ ಪ್ರಯುಕ್ತ ತಮ್ಮ ಮಹಾವಿದ್ಯಾಲಯದ ವಿಷಯವಾರು ಬೋಧಕರ ಪಟ್ಟಿ (ಖಾಯಂ ಮತ್ತು ಅತಿಥಿ ಉಪನ್ಯಾಸಕರು)ಯ ಅವಶ್ಯಕತೆಯಿದ್ದು, ಸದರಿ ಮಾಹಿತಿಯನ್ನು ಈ ಕೆಳಕಂಡ ನಮೂನೆಯಂತೆ **ದಿನಾಂಕ: 20-08-2019** ರೊಳಗಾಗಿ ಪ್ರಾಂಶುಪಾಲರು ಸಹಿ ಮಾಡಿದ ಪಟ್ಟಿಯನ್ನು ಪರೀಕ್ಷಾ ವಿಭಾಗಕ್ಕೆ **ತುರ್ತಾಗಿ** ಕಳುಹಿಸಿ ಕೊಡುವಂತೆ ಸೂಚಿಸಲಾಗಿದೆ.

ಮುಂದುವರೆದು, ಒಂದು ವೇಳೆ ಮಹಾವಿದ್ಯಾಲಯದ ಪ್ರಾಂಶುಪಾಲರು ಅತಿಥಿ ಉಪನ್ಯಾಸಕರ (ಸೇವಾನುಭವದ ಮೇಲೆ) ಮಾಹಿತಿಯನ್ನು ಸರಿಯಾಗಿ ನೀಡದಿದ್ದಲ್ಲಿ ಅಂತಹ ಮಹಾವಿದ್ಯಾಲಯಗಳ ಅತಿಥಿ ಉಪನ್ಯಾಸಕರನ್ನು ಮೌಲ್ಯಮಾಪನಕ್ಕಾಗಿ ಯಾವುದೇ ಕಾರಣಕ್ಕೂ ಪರಿಗಣಿಸಲಾಗುವುದಿಲ್ಲ. ಹಾಗೂ ಸದರಿಯವರ ಸೇವಾನುಭವದ ಬಗ್ಗೆ ಯಾರಿಂದಾದರೂ ಆಕ್ಷೇಪಣೆ ಬಂದರೆ ಸಂಬಂಧಪಟ್ಟ ಮಹಾವಿದ್ಯಾಲಯದ ಪ್ರಾಂಶುಪಾಲರೇ ಹೊಣೆಗಾರರಾಗುತ್ತಾರೆ. ಅಲ್ಲದೇ, ಕೆಲವು ಪ್ರಾಂಶುಪಾಲರು ಕಳುಹಿಸಿದ ಬೋಧಕರ ಪಟ್ಟಿ (ಅತಿಥಿ ಉಪನ್ಯಾಸಕರು)ಯಲ್ಲಿ ಪದೇ ಪದೇ ಬದಲಾಯಿಸುವುದು ಹಾಗೂ ಮೌಲ್ಯಮಾಪನ ಸಂದರ್ಭದಲ್ಲಿ ಬೋಧಕರ ಪಟ್ಟಿಯನ್ನು (ಬಿಟ್ಟಿರುವ ಹೆಸರನ್ನು ಮತ್ತು ಸೇವಾನುಭವವನ್ನು) ಸಲ್ಲಿಸುತ್ತಿರುವುದು ಕಂಡು ಬಂದಿದೆ. ಕಾರಣ, ಇನ್ನು ಮುಂದೆ ತಾವು ಈ ರೀತಿ ಕಳುಹಿಸಿದ ಪಕ್ಷದಲ್ಲಿ ಪರಿಗಣಿಸಲಾಗುವುದಿಲ್ಲ. ಆದ್ದರಿಂದ, ನಿಖರವಾದ ವಿವರಗಳೊಂದಿಗೆ ಮಾಹಿತಿಯನ್ನು ಒದಗಿಸಲು ಸೂಚಿಸಲಾಗಿದೆ.

| ಕ್ರಸಂ | ಅಧ್ಯಾಪಕರ ಹೆಸರು | ವಿದ್ಯಾರ್ಹತೆ | ಬೋಧನಾ ವಿಷಯ | ಹುದ್ದೆಗೆ ಸೇರಿದ ದಿನಾಂಕ | ಯುಜಿಸಿ/ ನಾನ್ ಯುಜಿಸಿ | ಸಲ್ಲಿಸಿದ ಸೇವೆ | | | ಮೊಬೈಲ್ ಸಂಖ್ಯೆ | ಇ-ಮೇಲ್ |
|---|---|---|---|---|---|---|---|---|---|---|
| | | | | | | ತಮ್ಮ ಕಾಲೇಜಿನಲ್ಲಿ | ಇತರೆ ಕಾಲೇಜಿನಲ್ಲಿ | ಒಟ್ಟು ಸಲ್ಲಿಸಿದ ಸೇವೆ | | |
| ೧. | | | | | | | | | | |
| ೨. | | | | | | | | | | |

ಕುಲಸಚಿವರು (ಮೌಲ್ಯಮಾಪನ) 24/7/19
ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯ
ಬಳ್ಳಾರಿ

ಗೆ,
ಎಲ್ಲಾ ಪ್ರಾಂಶುಪಾಲರು, ವಿ.ಶ್ರೀ.ಕೃ. ವಿಶ್ವವಿದ್ಯಾಲಯದ ಅಡಿಯಲ್ಲಿ ಬರುವ ಬಳ್ಳಾರಿ ಹಾಗೂ ಕೊಪ್ಪಳ ಜಿಲ್ಲೆಯ ಸ್ನಾತಕ ಮಹಾವಿದ್ಯಾಲಯಗಳು.

**ಪ್ರತಿಗಳು:**

೧. ಮಾನ್ಯ ಕುಲಪತಿಗಳ ಆಪ್ತ ಕಾರ್ಯದರ್ಶಿ, ವಿ.ಶ್ರೀ.ಕೃ. ವಿಶ್ವವಿದ್ಯಾಲಯ, ಬಳ್ಳಾರಿ ರವರ ಮಾಹಿತಿಗಾಗಿ.
೨. ಕುಲಸಚಿವರು, ವಿ.ಶ್ರೀ.ಕೃ. ವಿಶ್ವವಿದ್ಯಾಲಯ, ಬಳ್ಳಾರಿ ರವರ ಮಾಹಿತಿಗಾಗಿ.
೩. ಕಛೇರಿ ಪ್ರತಿ.